ಮಾನವ ಸಂಪನ್ಮೂಲ ವಿಭಾಗ/मानव संसाधन अनुभाग/**HUMAN RESOURCES SECTION**
ಭಾರತೀಯ ವಿಜ್ಞಾನ ಸಂಸ್ಥೆ/भारतीय विज्ञान संस्थान/**INDIAN INSTITUTE OF SCIENCE**
ಬೆಂಗಳೂರು/बेंगलूर/**BANGALORE – 560012**
ದೂರವಾಣಿ/दूरभाष/**TELEPHONE : 2293 2493**
ಇ-ಮೇಲ್/E-mail/ईमेल : recruitment.council@iisc.ac.in

## ಜಾಹೀರಾತು ಸಂಖ್ಯೆ.ಆರ (ಎಚ್)/308-2/2022 ದಿನಾಂಕ _26 November 2022

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | | | | ವಯೋಮಿತಿ (ಜಾಹೀರಾತಿನ ಕೊನೆಯ ದಿನಾಂಕಕ್ಕೆ ಅನ್ವಯಿಸುವಂತೆ) | ವೇತನ |
|---|---|---|---|---|---|---|---|
| | | ಸಾಮಾನ್ಯ | ಎಸ್ ಟಿ | ಎಸ್ ಸಿ | ಒಟ್ಟು | | |
| 01. | ಉಪ ಕುಲಸಚಿವರು | 01 | | | 01 | 50 ವರ್ಷ | 7ನೇ ಸಿಪಿಸಿಯಲ್ಲಿ ಹಂತ -12 |
| 02. | ಸಹಾಯಕ ಕುಲಸಚಿವರು | 02 | 01 | 01 | 04 | 45 ವರ್ಷ | 7ನೇ ಸಿಪಿಸಿಯಲ್ಲಿ ಹಂತ -10 |
| 03. | ಆಡಳಿತ ಅಧಿಕಾರಿ ಚಳ್ಳಕೆರೆ | 01 | | | 01 | | |

## ನಿಗದಿತ ಕನಿಷ್ಠ ವಿದ್ಯಾರ್ಹತೆ / ಅನುಭವ:

**1. ಉಪ ಕುಲಸಚಿವರು:**

### ವಿದ್ಯಾರ್ಹತೆ:

ಕನಿಷ್ಠ 55% ಅಂಕಗಳು ಅಥವಾ ಅದರ ಸಮಾನ ದರ್ಜೆಯೊಂದಿಗೆ ಸ್ನಾತಕೋತ್ತರ ಪದವಿ.

**ಅಪೇಕ್ಷಣೀಯ:**
ಮ್ಯಾನೇಜ್‌ಮೆಂಟ್/ಕಾನೂನು ಕ್ಷೇತ್ರದಲ್ಲಿ ವೃತ್ತಿಪರ ಅರ್ಹತೆ

**ಕಾರ್ಯಾನುಭವ:**
7ನೇ ಸಿಪಿಸಿ ಹಂತ-10 ರಲ್ಲಿ 5 ವರ್ಷಗಳ ಆಡಳಿತಾತ್ಮಕ ಅನುಭವ ಅಥವಾ ಸರ್ಕಾರ/ ಸಾರ್ವಜನಿಕ ಸಂಸ್ಥೆ-ಪಿ ಎಸ್ ಯು/ಸರ್ಕಾರಿ ಸಂಶೋಧನಾ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು/ ಶಾಸನಬದ್ಧ ಸಂಸ್ಥೆಗಳಲ್ಲಿ ಅದರ ಸಮಾನ ದರ್ಜೆ

**ಅಪೇಕ್ಷಣೀಯ:**
i) ಆಡಳಿತ / ಕಾನೂನು / ಹಣಕಾಸು / ಉಗ್ರಾಣ ಮತ್ತು ಖರೀದಿ / ಸ್ಥಾಪನೆಗಳು ವಿಭಾಗದಲ್ಲಿ ಅನುಭವ
ii) ಇ ಆರ್ ಪಿ ಸಕ್ರಿಯಗೊಳಿಸಿದ ಕೆಲಸದ ವಾತಾವರಣದಲ್ಲಿ ಆಡಳಿತ ಮತ್ತು ಹಣಕಾಸು ವಿಭಾಗದ ಅನುಭವ.

**2. ಸಹಾಯಕ ಕುಲಸಚಿವರು/ ಆಡಳಿತಾಧಿಕಾರಿ (ಚಳ್ಳಕೆರೆ)**

**ವಿದ್ಯಾರ್ಹತೆ:**

ಕನಿಷ್ಠ 55% ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಅಥವ ಉತ್ತಮ ಶೈಕ್ಷಣಿಕ ದಾಖಲೆಗಳೊಂದಿಗೆ ಅದಕ್ಕೆ ಸಮಾನ ವ್ಯಾಸಂಗ.

**ಅಪೇಕ್ಷಣೀಯ:**

ಮ್ಯಾನೇಜ್‌ಮೆಂಟ್/ಕಾನೂನು ಕ್ಷೇತ್ರದಲ್ಲಿ ವೃತ್ತಿಪರ ಅರ್ಹತೆ

**ಕಾರ್ಯಾನುಭವ:**

ಉನ್ನತ ಶಿಕ್ಷಣದ ಸರ್ಕಾರಿ/ಅರೆ ಸರ್ಕಾರಿ/ಸಾರ್ವಜನಿಕ ವಲಯ/ ಸ್ವಾಯತ್ತ ಶಿಕ್ಷಣ ಸಂಸ್ಥೆಯ ಸಂಬಂಧಿತ ಕ್ಷೇತ್ರದಲ್ಲಿ 8 ವರ್ಷಗಳ ಮೇಲ್ವಿಚಾರಣಾ ಅನುಭವ. ಈ 8 ವರ್ಷಗಳಲ್ಲಿ, 5 ವರ್ಷಗಳ ಅನುಭವವು ಹಂತ - 7 ಅಥವಾ ಅದರ ಸಮಾನ ದರ್ಜೆಯಲ್ಲಿರಬೇಕು.

ಆದಾಗ್ಯೂ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಹಂತ - 7ರ ಅಥವ ಅದಕ್ಕಿಂತ ಉನ್ನತ ಹಂತದಲ್ಲಿ ಕನಿಷ್ಠ 8 ವರ್ಷಗಳವರೆಗೆ ಆಡಳಿತ/ಕಾರ್ಯದರ್ಶಿ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವ, ಸ್ನಾತಕೋತ್ತರ ಪದವಿ ಹೊಂದಿದ ಮತ್ತು ಉತ್ಕೃಷ್ಟ ಕಾರ್ಯಕ್ಷಮತೆಯ ದಾಖಲೆ ಹೊಂದಿದ ಸಿಬ್ಬಂದಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. [ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ವಯಸ್ಸಿನ ಮಿತಿ ಅನ್ವಯಿಸುವುದಿಲ್ಲ].

ಉನ್ನತ ಶಿಕ್ಷಣದ ಶಿಕ್ಷಣ ಸಂಸ್ಥೆ ಎಂದರೆ ಭಾರತದ ಸರ್ಕಾರ ನೀಡಿದ ಸಂಸ್ಥೆಗಳ ಪಟ್ಟಿ. ಸರ್ಕಾರದ ಪರವಾಗಿ ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆ ಜಾಲತಾಣದಲ್ಲಿ ಪಟ್ಟಿ ಲಭ್ಯವಿದೆ. ಅಂತಹ ಉನ್ನತ ಶಿಕ್ಷಣ ಸಂಸ್ಥೆಗಳ ವಿಶೇಷ ಪಟ್ಟಿ ಈ ಕೆಳಗಿನಂತಿದೆ:-

ಎ) ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ (ಇನ್ ಸ್ಟಿಟ್ಯೂಟ್ ಆಫ್ ನ್ಯಾಷನಲ್ ಇಂಪಾರ್ಟೆನ್ಸ್) https://www.education.gov.in/en/institutions-national-importance

ಬಿ) ಕೇಂದ್ರೀಯ ವಿಶ್ವವಿದ್ಯಾಲಯಗಳು - https://www.education.gov.in/en/central-universities-0

ಸಿ) ರಾಜ್ಯ ವಿಶ್ವವಿದ್ಯಾಲಯಗಳು - https://www.education.gov.in/en/state-universities

ಡಿ) ಶಿಕ್ಷಣ ಸಚಿವಾಲಯ ಅನುದಾನಿತ ತಾಂತ್ರಿಕ ಸಂಸ್ಥೆಗಳು - https://www.education.gov.in/en/technical-education-1

**ಅಪೇಕ್ಷಣೀಯ:**

i) ಆಡಳಿತ / ಕಾನೂನು / ಹಣಕಾಸು / ಉಗ್ರಾಣ ಮತ್ತು ಖರೀದಿ / ಸ್ಥಾಪನೆಗಳು ಮತ್ತು ಸಾರ್ವಜನಿಕ ಸಂಪರ್ಕ ವಿಭಾಗದಲ್ಲಿ ಅನುಭವ

ii) ಇ ಆರ್ ಪಿ ಸಕ್ರಿಯಗೊಳಿಸಿದ ಕೆಲಸದ ವಾತಾವರಣದಲ್ಲಿ ಅನುಭವ.

**ಆಯ್ಕೆ ವಿಧಾನ**

ಉಪ ಕುಲಸಚಿವರ ಹುದ್ದೆಗೆ ಲಿಖಿತ ಪರೀಕ್ಷೆ, ಗುಂಪು ಚರ್ಚೆ ಮತ್ತು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಸಹಾಯಕ ಕುಲಸಚಿವರು/ಆಡಳಿತಾಧಿಕಾರಿ (ಚಳ್ಳಕೆರೆ) ಹುದ್ದೆಗೆ ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

ಲಿಖಿತ ಆಪ್ಟಿಟ್ಯೂಡ್ ಪರೀಕ್ಷೆಯು ಕಂಪ್ಯೂಟರ್ ಆಧಾರಿತ ಎಂಸಿಕ್ಯು ಪರೀಕ್ಷೆಯಾಗಿದ್ದು, ಪರೀಕ್ಷೆ ಯೋಜನೆ ಮತ್ತು ಪಠ್ಯಕ್ರಮ ಅನುಬಂಧ-1ರಲ್ಲಿದೆ.

**ಶುಲ್ಕಗಳು:**

ಎಸ್‌ಸಿ, ಎಸ್ ಟಿ, ಪಿಡಬ್ಲ್ಯೂಡಿ, ಮಾಜಿ ಸೈನಿಕರು, ಲಿಂಗಪರಿವರ್ತಿತ ವರ್ಗಕ್ಕೆ ಸೇರಿದ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಪ್ರಕ್ರಿಯೆ ಶುಲ್ಕ ರೂ. 50. ಇತರೆ ಅಭ್ಯರ್ಥಿಗಳು ರೂ. 450/- ಅರ್ಜಿ ಶುಲ್ಕ ಮತ್ತು ರೂ. 50/- ಪ್ರಕ್ರಿಯೆ ಶುಲ್ಕ ಪಾವತಿಸಬೇಕು. ಒಮ್ಮೆ ಪಾವತಿಸಿದ ಶುಲ್ಕವನ್ನು ಮರು ಪಾವತಿಸಲಾಗುವುದಿಲ್ಲ.

**ನಿಯಮಗಳು ಮತ್ತು ಷರತ್ತುಗಳು:**

1. ಉಪ ಕುಲಸಚಿವರು ಮತ್ತು ಸಹಾಯಕ ಕುಲಸಚಿವರ ಹುದ್ದೆಗಳು ದಿವ್ಯಾಂಗ ಅಭ್ಯರ್ಥಿಗಳಿಗೂ ಸಹ ಸೂಕ್ತವಾಗಿವೆ. ಒಂದು ಕಾಲು ಊನಗೊಂಡಿರುವುದು (ಒಎಚ್ ವರ್ಗ), ಅಪಘಾತದಿಂದಾದ ಊನ, ಒಎಲ್/ ಒಎ/ ದೃಷ್ಟಿದೋಷ (ಬಿ) ಅಥವ ಅರೆ ದೃಷ್ಟಿ ದೋಷ (ಎಲ್ ವಿ) ಅಥವ ಶ್ರವಣ ದೋಷ (ಎಚ್ ಎಚ್) ಇತ್ಯಾದಿ.
2. ವಯೋಮಿತಿ ಮತ್ತು ವಿದ್ಯಾರ್ಹತೆಗಳಲ್ಲಿನ ಸಡಿಲಿಕೆಗಳು ಸಂಸ್ಥೆಗೆ ಅನ್ವಯವಾಗುವಂತೆ ಭಾರತ ಸರ್ಕಾರದ ನಿಯಮಗಳ ಪ್ರಕಾರ ಎರಡೂ ಹುದ್ದೆಗಳಿಗೆ ಗರಿಷ್ಠ ವಯೋಮಿತಿ ಸಡಿಲಿಕೆ (ಎಲ್ಲ ವರ್ಗಗಳಿಗೆ ಅನ್ವಯಿಸುವಂತೆ) 55 ವರ್ಷಗಳು.
3. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು.
4. ನೇಮಕಾತಿಗಳು ನಿಯಮಿತ ಆಧಾರದ ಮೇಲೆ 2 ವರ್ಷಗಳ ಪ್ರಶಿಕ್ಷಣಾರ್ಥಿ (ಪ್ರೊಬೆಷನರಿ) ಅವಧಿಯೊಂದಿಗೆ ಇರಲಿದೆ.
5. ಸಂಸ್ಥೆಯ ಕೇಡರ್ ಮತ್ತು ನೇಮಕಾತಿ ನಿಯಮಗಳ ಪ್ರಕಾರ, ನೇರ ನೇಮಕಾತಿ ವಿಧಾನ ಅನುಸರಿಸಿದ ಸಂದರ್ಭದಲ್ಲಿ, ನಿರ್ದೇಶಕರ ವಿವೇಚನೆಯ ಮೇರೆಗೆ ಹುದ್ದೆಗಳನ್ನು ಪ್ರಭಾರ (ಡೆಪ್ಯುಟೇಶನ್) ಅಥವಾ ಗುತ್ತಿಗೆ ಮೂಲಕ ಭರ್ತಿ ಮಾಡಬಹುದು.
6. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಯಾವುದೇ ವಿಷಯದಲ್ಲಿ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಪತ್ರವ್ಯವಹಾರವನ್ನು ನಡೆಸುವುದಿಲ್ಲ. ಭೌತಿಕ ಅರ್ಜಿಗಳನ್ನು ಪರಿಗಣಿಸುವುದಿಲ್ಲ.
7. ಕೇಂದ್ರ/ರಾಜ್ಯ ಸರ್ಕಾರಗಳು ಅಥವಾ ರಾಷ್ಟ್ರೀಯ ಪ್ರಾಮುಖ್ಯತೆ ಅಥವಾ ವಿಶ್ವವಿದ್ಯಾಲಯಗಳು/ ವಿಶ್ವವಿದ್ಯಾಲಯ ಮಟ್ಟದ ಸಂಸ್ಥೆಗಳು ಅಥವಾ ಸಾರ್ವಜನಿಕ ವಲಯದ (ಪಿಎಸ್‌ಯು) ಸಂಸ್ಥೆಗಳಿಂದ ಪ್ರಭಾರಿ ಅಧಿಕಾರಿಗಳ ನಿಯೋಜನೆಯನ್ನು ಈ ಕೆಳಗೆ ನಮೂದಿಸಿದ ಸಂದರ್ಭದಲ್ಲಿ ಪರಿಗಣಿಸಬಹುದು.
   i) ಸಮಾನಂತರ ಹುದ್ದೆಯಲ್ಲಿರುವ ಅಧಿಕಾರಿ/ಅಥವಾ
   ii) ನೇರ ನೇಮಕಾತಿಗಾಗಿ ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತೆ ಮತ್ತು ಅನುಭವವನ್ನು ಹೊಂದಿರುವ ಸಿಬ್ಬಂದಿ.
8. ನಿಗದಿತ ವಿದ್ಯಾರ್ಹತೆ ಕನಿಷ್ಠ ಅರ್ಹತೆಯಾಗಿದ್ದು, ಅಭ್ಯರ್ಥಿಯು ಅದನ್ನು ಹೊಂದಿದ್ದಾರೆ ಎಂಬ ಮಾತ್ರಕ್ಕೆ ಲಿಖಿತ ಪರೀಕ್ಷೆಗೆ ಅವರನ್ನು ಕರೆಯಲು ಅರ್ಹತೆ ಇದೆ ಎಂದೇನಲ್ಲ. ಅರ್ಹತೆ ಮತ್ತು/ಅಥವಾ ಅನುಭವದ ಆಧಾರದಲ್ಲಿ ಸಂದರ್ಶನಕ್ಕೆ ಪ್ರವೇಶ ಪಡೆಯುವ ಅಭ್ಯರ್ಥಿಗಳ ಸಂಖ್ಯೆಯನ್ನು ನಿರ್ಬಂಧಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿದೆ.
9. ಎಲ್ಲ ಅಭ್ಯರ್ಥಿಗಳು ಪ್ರಸಕ್ತ ಉದ್ಯೋಗದಾತರಿಂದ ನಿರಾಕ್ಷೇಪಣಾ ಪತ್ರ (ಎನ್ ಒ ಸಿ) ಪಡೆದುಕೊಳ್ಳಬೇಕು ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಒಂದುವೇಳೆ, ಪ್ರಮಾಣಪತ್ರಗಳ ಪರಿಶೀಲನೆಯ ಸಮಯದಲ್ಲಿ ಎನ್‌ಒಸಿ ಸಲ್ಲಿಸಲಾಗುವುದು ಎಂದು ಸಮರ್ಪಕವಾಗಿ ಸಹಿ ಮಾಡಿದ ಒಪ್ಪಂದವನ್ನು ಅಭ್ಯರ್ಥಿಯು ಅಪ್‌ಲೋಡ್ ಮಾಡಿದಲ್ಲಿ, ಎನ್‌ಒಸಿ ಇಲ್ಲದ ಅರ್ಜಿಯನ್ನು ಸಹ ಪರಿಗಣಿಸಲಾಗುತ್ತದೆ.
10. ಸಹಾಯಕ ಕುಲಸಚಿವರು ಮತ್ತು ಆಡಳಿತಾಧಿಕಾರಿ (ಚಳ್ಳಕೆರೆ) ಹುದ್ದೆಗಳೆರಡಕ್ಕೂ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಆದ್ಯತೆಯನ್ನು ಉಲ್ಲೇಖಿಸಬೇಕು. ಒಮ್ಮೆ ಆಯ್ಕೆಯಾದ ಮೇಲೆ ಯಾವುದೇ ಕಾರಣಕ್ಕೂ ಆದ್ಯತೆಯ ಆಯ್ಕೆಯನ್ನು ಬದಲಾಯಿಸುವಂತಿಲ್ಲ.
11. ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೆ ಕಾಯದೆ, ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸಬೇಕು.
12. ಸೀಮಿತ ಪಟ್ಟಿಗೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಹಾಜರಾಗಲು ಆಹ್ವಾನ ಪತ್ರಗಳನ್ನು ಇ-ಮೇಲ್ ಮೂಲಕ ಮಾತ್ರ ಕಳುಹಿಸಲಾಗುತ್ತದೆ. ಅಭ್ಯರ್ಥಿಗಳು ತಮ್ಮ ನೋಂದಾಯಿತ ಇ-ಮೇಲ್ ಅನ್ನು ಆಗಾಗ್ಗೆ ಪರಿಶೀಲಿಸುತ್ತಿರಬೇಕು.

ಸೀಮಿತ ಪಟ್ಟಿಗೆ ಆಯ್ಕೆಯಾಗದ/ ಸಂದರ್ಶನಕ್ಕೆ ಅರ್ಹತೆ ಹೊಂದಿರದ ಅರ್ಜಿದಾರರೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.

13. ಯಾವುದೇ ಕಾರಣ ನೀಡದೆ ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ. ಯಾವುದೇ ಆಡಳಿತಾತ್ಮಕ ಕಾರಣದಿಂದ ಯಾವುದೇ ಹಂತದಲ್ಲಿ ಜಾಹೀರಾತು/ನೇಮಕಾತಿಯನ್ನು ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಈ ನಿಟ್ಟಿನಲ್ಲಿ ಯಾವುದೇ ಪತ್ರವ್ಯವಹಾರವನ್ನು ನಡೆಸಲಾಗುವುದಿಲ್ಲ.

14. ಸಂದರ್ಶನವನ್ನು ಆನ ಲೈನ ಮೂಲಕ ಅಥವ ಭೌತಿಕವಾಗಿ ನಡೆಸುವ ತನ್ನ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿದೆ. ಸಂದರ್ಶನಕ್ಕೆ ಕರೆಯಲಾದ ಹೊರಗಿನ ಸ್ಥಳದ ಅರ್ಹ ಅಭ್ಯರ್ಥಿಗಳಿಗೆ ಅವರ ಸ್ಥಳದಿಂದ ಬೆಂಗಳೂರಿಗೆ ಆಗಮಿಸುವ ಮತ್ತು ಹಿಂದಿರುಗುವ ಅತಿ ಕಡಿಮೆ ದೂರದ ಮಾರ್ಗದಲ್ಲಿನ ರೈಲು ಪ್ರಯಾಣದ ಎ.ಸಿ. ದ್ವಿತೀಯ ದರ್ಜೆ ಟಿಕೆಟ ಶುಲ್ಕವನ್ನು ಪಾವತಿಸಲಾಗುತ್ತದೆ.

15. ಸೇವೆಯ ಅವಧಿಯಲ್ಲಿ, ಪ್ರತಿಯೊಬ್ಬ ಉದ್ಯೋಗಿಯು ಯೋಜನೆ, ನಿಯಮಗಳು ಮತ್ತು ಬೈಲಾಗಳು (SRB), ಆಡಳಿತಾತ್ಮಕ ಕೈಪಿಡಿಗಳು, ಇತರ ಶಾಸನಬದ್ಧ ದಾಖಲೆಗಳು, CCS (ನಡವಳಿಕೆ) ನಿಯಮಗಳು ಮತ್ತು CCS (CCA) ನಿಯಮಗಳು ಇತ್ಯಾದಿಗಳನ್ನು ಗಮನಿಸಬೇಕು, ಬದ್ಧವಾಗಿರಬೇಕು ಮತ್ತು ಪಾಲಿಸಬೇಕು.

16. ಸಂಸ್ಥೆಯ ಸೇವೆಗೆ ಜನವರಿ 1, 2004 ರ ಅಥವಾ ನಂತರ ನೇಮಕಗೊಂಡ ಎಲ್ಲಾ ಉದ್ಯೋಗಿಗಳು ಹೊಸ ಪಿಂಚಣಿ ಯೋಜನೆ (ಎನ ಪಿ ಎಸ ) ವ್ಯಾಪ್ತಿಗೆ ಬರುತ್ತಾರೆ. 31-12-2003ಕ್ಕೆ ಮುಂಚಿತವಾಗಿ ಸೇರ್ಪಡೆಯಾದ ಸಿಬ್ಬಂದಿಯು 1972ರ ಸಿಸಿಎಸ (ಪಿಂಚಣಿ) ನಿಯಮಾವಳಿ ಅನ್ವಯ ಭಾರತ ಸರ್ಕಾರ ಸೂಚಿಸಿರುವ ಜಿಪಿಎಫ ಪಿಂಚಣಿ ಮತ್ತು ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

17. ಸೇವಾವಧಿಯ ಯಾವುದೇ ಸಮಯದಲ್ಲಿ ಅಭ್ಯರ್ಥಿ ಸಲ್ಲಿಸಿದ ಪೂರ್ವಮಾಹಿತಿ ಅಥವಾ ದಾಖಲೆಗಳನ್ನು ಪರಿಶೀಲಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಅಭ್ಯರ್ಥಿಯು ಸಲ್ಲಿಸಿದ ದಾಖಲೆಗಳು ಅಸಲಿ ಅಲ್ಲ ಎಂದು ಕಂಡುಬಂದಲ್ಲಿ, , ನಂತರದ ಪ್ರಕ್ರಿಯೆಯ ನಂತರ ಅವರ ಸೇವೆಗಳನ್ನು ಕೊನೆಗೊಳಿಸಲಾಗುತ್ತದೆ ಮತ್ತು ಶಿಸ್ತುಕ್ರಮ/ಕ್ರಿಮಿನಲ ಮೊಕದ್ದಮೆಗಳನ್ನು ಪ್ರಾರಂಭಿಸಲಾಗುತ್ತದೆ.

18. ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ಸಿಜಿಪಿಎ/ಜಿಪಿಎ ವ್ಯವಸ್ಥೆಯ ಅಡಿಯಲ್ಲಿ ಪದವಿಗಳನ್ನು ಪಡೆದ ಅಭ್ಯರ್ಥಿಗಳು ಸಿಜಿಪಿಎ/ಜಿಪಿಎ ಅನ್ನು ಸೂಕ್ತ ಶೇಕಡಾವಾರುಗೆ ಪರಿವರ್ತಿಸಲು ವಿಶ್ವವಿದ್ಯಾಲಯ/ಸಂಸ್ಥೆಯ ಮಾರ್ಗಸೂಚಿಗಳ ಪ್ರಕಾರ ಪಡೆದ ಅಂಕಗಳ ಸರಿಯಾದ ಶೇಕಡಾವಾರು ಪ್ರಮಾಣವನ್ನು ಸಲ್ಲಿಸಬೇಕಿರುತ್ತದೆ.

19. ಫಲಿತಾಂಶಗಳನ್ನು ಪ್ರಕಟಿಸುವ ಮೊದಲು ಅರ್ಜಿದಾರರು ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ವಿವರಗಳನ್ನು ಸಮರ್ಪಕವಾಗಿ ಪರಿಶೀಲಿಸಲಾಗುತ್ತದೆ. ಅಭ್ಯರ್ಥಿಗಳು ತಾವು ಭರ್ತಿ ಮಾಡಿದ ವಿವರಗಳಿಗೆ ಅಧಿಕೃತ ಪುರಾವೆಗಳನ್ನು ಒದಗಿಸಲು ವಿಫಲವಾದರೆ, ಅವರ ಉಮೇದುವಾರಿಕೆಯನ್ನು ಕೂಡಲೇ ವಜಾಗೊಳಿಸಲಾಗುತ್ತದೆ.

20. ಆನ ಲೈನ ಲ್ಲಿ ಅರ್ಜಿಗಳನ್ನು ಸಲ್ಲಿಸಲು ನೇಮಕಾತಿ ಪೋರ್ಟಲ26/11/2022 (1: 00p.m.) ರಿಂದ 16/12/2022 (11:55 p.m.) ರ ವರೆಗೆ ತೆರೆದಿರುತ್ತದೆ.

21. ಆಡಳಿತಾಧಿಕಾರಿ (ಚಳ್ಳಕೆರೆ) ಹುದ್ದೆ ವರ್ಗಾವಣೆ ರಹಿತವಾಗಿದ್ದು ಇದನ್ನು ಹೊರತುಪಡಿಸಿ ಮೇಲೆ ನಮೂದಿಸಿದ ಇತರ ಹುದ್ದೆಗಳು ವರ್ಗಾವಣೆಗೆ ಒಳಪಟ್ಟಿರುತ್ತವೆ.

**ಆಸಕ್ತರು ಸಂಸ್ಥೆಯ ಜಾಲತಾಣ: https://iisc.ac.in/positions-open/ ಇಲ್ಲಿಗೆ ಭೇಟಿ ನೀಡಿ ತಮ್ಮ ಶೈಕಷ ಕ ಅರ್ಹತೆ, ವಯಸ್ಸು, ಸಮುದಾಯ, ಅಂಗನ್ಯೂನತೆ, ಕಾರ್ಯಾನುಭವ, ಎನ ಒ ಸಿ ಇತ್ಯಾದಿ ವಿವರಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು ಮತ್ತು ಅರ್ಜಿಯನ್ನು16/12/2022 ರೊಳಗೆ ಅಪ ಲೋಡ ಮಾಡಲು ಕೋರಲಾಗಿದೆ.**

## ಅನುಬಂಧ-1

**ಪರೀಕ್ಷಾ ವಿಧಾನ ಮತ್ತು ಪರೀಕ್ಷಾ ವಿವರ**

**ಉಪಕುಲಸಚಿವರು**

| ವಿಷಯ | | ಪ್ರತಿ ಪ್ರಶ್ನೆಗೆ ಅಂಕ | ಪ್ರಶ್ನೆಗಳ ಒಟ್ಟು ಸಂಖ್ಯೆ |
|---|---|---|---|
| ಪತ್ರಿಕೆ ಎ | | | |
| 1. | ಲಾಜಿಕಲ್ ರೀಸನಿಂಗ್ (ತಾರ್ಕಿಕ ಪರೀಕ್ಷೆ) | 1 ಅಂಕ | 15 |
| 2. | ಸಾಂಖ್ಯಿಕ ಪರೀಕ್ಷೆ | 1 ಅಂಕ | 15 |

| | | | |
|---|---|---|---|
| 3. | ಪದಗಳ ಪರೀಕ್ಷೆ | 1 ಅಂಕ | 10 |
| 4. | ಸಾಮಾನ್ಯ ಜ್ಞಾನ | 1 ಅಂಕ | 10 |
| 5. | ಸರ್ಕಾರಿ ನಿಯಮಗಳ ಕುರಿತ ಪ್ರಾವೀಣ್ಯತೆ ಪರೀಕ್ಷೆ | 1 ಅಂಕ | 40 |
| 6. | ಎಸ್ ಎ ಪಿ (ಸ್ಯಾಪ್) ಸಾಮರ್ಥ್ಯ | 1 ಅಂಕ | 10 |
| **ಒಟ್ಟು** | | | **100** |

**ಸಹಾಯಕ ಕುಲಸಚಿವರು/ ಆಡಳಿತಾಧಿಕಾರಿ ಚಳ್ಳಕೆರೆ**

| **ವಿಷಯ** | | **ಪ್ರತಿ ಪ್ರಶ್ನೆಗೆ ಅಂಕ** | **ಪ್ರಶ್ನೆಗಳ ಒಟ್ಟು ಸಂಖ್ಯೆ** |
|---|---|---|---|
| **ಪತ್ರಿಕೆ ಎ** | | | |
| 1. | ಲಾಜಿಕಲ್ ರೀಸನಿಂಗ್ (ತಾರ್ಕಿಕ ಪರೀಕ್ಷೆ) | 1 ಅಂಕ | 15 |
| 2. | ಸಾಂಖ್ಯಿಕ ಪರೀಕ್ಷೆ | 1 ಅಂಕ | 05 |
| 3. | ಪದಗಳ ಪರೀಕ್ಷೆ | 1 ಅಂಕ | 15 |
| 4. | ಸಾಮಾನ್ಯ ಜ್ಞಾನ | 1 ಅಂಕ | 05 |
| 5. | ಸರ್ಕಾರಿ ನಿಯಮಗಳ ಕುರಿತ ಪ್ರಾವೀಣ್ಯತೆ ಪರೀಕ್ಷೆ | 1 ಅಂಕ | 50 |
| 6. | ಎಸ್ ಎ ಪಿ (ಸ್ಯಾಪ್) ಸಾಮರ್ಥ್ಯ | 1 ಅಂಕ | 10 |
| **ಒಟ್ಟು** | | | **100** |

**ಭಾಗ-ಎ**

1. ಲಾಜಿಕಲ್ ರೀಸನಿಂಗ್ [ತಾರ್ಕಿಕ ಪರೀಕ್ಷೆ].

ಇದು ಪದ(ವರ್ಬಲ್) ಮತ್ತು ನಾನ್ ವರ್ಬಲ್ ಪ್ರಕಾರದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಈ ವಿಭಾಗದಲ್ಲಿ ಸಾದೃಶ್ಯಗಳು, ಹೋಲಿಕೆಗಳು ಮತ್ತು ವ್ಯತ್ಯಾಸಗಳು, ಬಾಹ್ಯಾಕಾಶ ದೃಶ್ಯೀಕರಣ, ಪ್ರಾದೇಶಿಕ ದೃಷ್ಟಿಕೋನ, ಸಮಸ್ಯೆ ಪರಿಹಾರ, ವಿಶ್ಲೇಷಣೆ, ತೀರ್ಪು, ನಿರ್ಧಾರ ಕೈಗೊಳ್ಳುವಿಕೆ, ದೃಶ್ಯ ಸ್ಮರಣೆ, ತಾರತಮ್ಯ, ವೀಕ್ಷಣೆ, ಸಂಬಂಧ ಪರಿಕಲ್ಪನೆಗಳು, ಅಂಕಗಣಿತದ ತಾರ್ಕಿಕತೆ ಮತ್ತು ಸಾಂಕೇತಿಕ ವರ್ಗೀಕರಣ, ಅಂಕಗಣಿತದ ಸಂಖ್ಯೆ ಸರಣಿ, ಇತರ ಪ್ರಶ್ನೆಗಳನ್ನು ಒಳಗೊಂಡಿರಲಿದೆ. ಮೌಖಿಕ ಸರಣಿ, ಕೋಡಿಂಗ್ ಮತ್ತು ಡಿಕೋಡಿಂಗ್, ಹೇಳಿಕೆಯ ತೀರ್ಮಾನ, ತಾರ್ಕಿಕತೆ ಇತ್ಯಾದಿಗಳು ಇರಲಿವೆ. ಲಾಕ್ಷಣಿಕ ಸಾದೃಶ್ಯ, ಸಾಂಕೇತಿಕ/ಸಂಖ್ಯೆಯ ಸಾದೃಶ್ಯ, ಆಕೃತಿಯ ಸಾದೃಶ್ಯ, ಶಬ್ದಾರ್ಥ ಸರಣಿ, ಸಂಖ್ಯೆ ಸರಣಿ, ಚಿತ್ರ ಸರಣಿ, ಸಮಸ್ಯೆ ಪರಿಹಾರ, ಪದ ನಿರ್ಮಾಣ, ಕೋಡಿಂಗ್ ಮತ್ತು ಡಿ-ಕೋಡಿಂಗ್, ಕಾರ್ಯಾಚರಣೆಗಳು, ಸಾಂಕೇತಿಕ ಕಾರ್ಯಾಚರಣೆಗಳು, ಟ್ರೆಂಡ್‌ಗಳು, ಬಾಹ್ಯಾಕಾಶ ದೃಷ್ಟಿಕೋನ, ಬಾಹ್ಯಾಕಾಶ ದೃಶ್ಯೀಕರಣ, ವೆನ್ ನ ರೇಖಾಚಿತ್ರಗಳು, ರೇಖಾಚಿತ್ರದ ತೀರ್ಮಾನಗಳು, ಪಂಚ್ ಹೋಲ್/ಪ್ಯಾಟರ್ನ್ - ಫೋಲ್ಡಿಂಗ್ ಮತ್ತು ಅನ್-ಫೋಲ್ಡಿಂಗ್, ಫಿಗರ್ ಪ್ಯಾಟರ್ನ್-ಫೋಲ್ಡಿಂಗ್ ಮತ್ತು ಪೂರ್ಣಗೊಳಿಸುವಿಕೆ, ಸೂಚಿಗಳು, ವಿಳಾಸ ಹೊಂದಾಣಿಕೆ, ದಿನಾಂಕ ಮತ್ತು ನಗರ ಕೇಂದ್ರ ಹೊಂದಾಣಿಕೆ, ವರ್ಗೀಕರಣ ಕೋಡ್‌ಗಳು/ ಅನುಕ್ರಮಣ ಸಂಖ್ಯೆಗಳು, ಸ್ಮಾಲ್ ಮತ್ತು ಬಿಗ್ ಲೆಟರ್

ಗಳು/ಸಂಖ್ಯೆಗಳ ಕೋಡಿಂಗ್, ಡಿಕೋಡಿಂಗ್ ಮತ್ತು ವರ್ಗೀಕರಣ, ಎಂಬೆಡೆಡ್ ಫಿಗರ್ಸ್, ಕ್ರಿಟಿಕಲ್ ಥಿಂಕಿಂಗ್, ಭಾವನಾತ್ಮಕ ಬುದ್ಧಿಮತ್ತೆ, ಸಾಮಾಜಿಕ ಬುದ್ಧಿಮತ್ತೆ ಮತ್ತು ಇತರೆ ಉಪ ವಿಷಯಗಳು ಇರಲಿವೆ.

**2. ಸಂಖ್ಯಾತ್ಮಕ ತರ್ಕ**

ಅಭ್ಯರ್ಥಿಯ ಸಂಖ್ಯೆಗಳ ಸೂಕ್ತ ಬಳಕೆಯ ಸಾಮರ್ಥ್ಯವನ್ನು ಮತ್ತು ಸಂಖ್ಯೆಯ ಅರ್ಥವನ್ನು ಪರೀಕ್ಷಿಸಲು ಅನುಗುಣವಾದ ಪ್ರಶ್ನೆಗಳನ್ನು ವಿನ್ಯಾಸಗೊಳಿಸಲಾಗಿದೆ. ಪರೀಕ್ಷೆಯ ವ್ಯಾಪ್ತಿಯು ಶೇಕಡಾವಾರು ಮತ್ತು ಅನುಪಾತ, ವರ್ಗಮೂಲ, ಸರಾಸರಿ, ಬಡ್ಡಿ, ಲಾಭ ಮತ್ತು ನಷ್ಟ, ರಿಯಾಯಿತಿ, ಪಾಲುದಾರಿಕೆ ವ್ಯವಹಾರ, ಸಮ್ಮಿಶ್ರ, ಸಮಯ ಮತ್ತು ದೂರ, ಸಮಯ ಮತ್ತು ಕೆಲಸ, ಶಾಲಾ ಬೀಜಗಣಿತ, ಮೂಲ ಬೀಜಗಣಿತ, ರೇಖೀಯ ಸಮೀಕರಣಗಳ ನಕ್ಷೆಗಳು, ತ್ರಿಕೋನ, ಸ್ಪರ್ಶಕಗಳು, ವೃತ್ತಗಳು, ಕೋನಗಳು, ಎರಡು ಅಥವಾ ಹೆಚ್ಚಿನ ವಲಯಗಳಿಗೆ ಸಾಮಾನ್ಯ ಸ್ಪರ್ಶಕಗಳು, ತ್ರಿಕೋನ, ಚತುರ್ಭುಜಗಳು, ನಿಯಮಿತ ಬಹುಭುಜಗಳು, ವೃತ್ತ, ಪಟ್ಟಕ, ಲಂಬಕೋನ, ವೃತ್ತಾಕಾರದ ಕೋನ್, ಬಲ ವೃತ್ತಾಕಾರದ ಸಿಲಿಂಡರ್, ಅರ್ಧಗೋಳಗಳು, ಆಯತಾಕಾರದ ಸಮಾನಾಂತರ ಪಿರಮಿಡ್, ತ್ರಿಕೋನ ಅಥವಾ ಚದರ ತಳವಿರುವ ನಿಯಮಿತ ಪಿರಮಿಡ್, ತ್ರಿಕೋನಮಿತೀಯ ಅನುಪಾತ, ರೇಡಿಯನ್ ಅಳತೆಗಳು, ಪ್ರಮಾಣಿತ ಗುರುತುಗಳು, ಪೂರಕ ಕೋನಗಳು, ಎತ್ತರಗಳು ಮತ್ತು ದೂರಗಳು, ಹಿಸ್ಟೋಗ್ರಾಮ್, ಆವರ್ತನ ಬಹುಭುಜಾಕೃತಿ, ಪಟ್ಟಿ, ಪೈ ರೇಖಾಚಿತ್ರ ಮತ್ತು ಇತರ ಮೆಟ್ರಿಕ್ ಮಟ್ಟದ ಪ್ರಶ್ನೆಗಳು ಇರಲಿವೆ.

**3 . ಪದಬಳಕೆಯ ತರ್ಕ**

ಈ ಘಟಕದಲ್ಲಿನ ಪ್ರಶ್ನೆಗಳನ್ನು ಅಭ್ಯರ್ಥಿಯ ತಿಳುವಳಿಕೆ ಮತ್ತು ಇಂಗ್ಲಿಷ್ ಭಾಷೆಯ ಜ್ಞಾನವನ್ನು ಪರೀಕ್ಷಿಸಲು ವಿನ್ಯಾಸಗೊಳಿಸಲಾಗಿದೆ. ತಪ್ಪುಗಳನ್ನು ಗುರುತಿಸುವುದು, ಖಾಲಿ ಜಾಗಗಳನ್ನು ಭರ್ತಿ ಮಾಡುವುದು, ಸಮಾನಾರ್ಥಕ ಪದಗಳು, ಆಂಟೊನಿಮ್‌ಗಳು, ಕಾಗುಣಿತ/ಪತ್ತೆ ಹಚ್ಚುವಿಕೆ ತಪ್ಪಾದ ಪದಗಳು, ಭಾಷಾ ವೈಶಿಷ್ಟ್ಯಗಳು ಮತ್ತು ಪದಗುಚ್ಛಗಳು, ಒಂದು ಪದದ ಪರ್ಯಾಯವನ್ನು ಆಧರಿಸಿರುತ್ತದೆ. ವಾಕ್ಯಗಳ ಸುಧಾರಣೆ, ಕ್ರಿಯಾಪದಗಳ ಸಕ್ರಿಯ/ನಿಷ್ಕ್ರಿಯ ಧ್ವನಿ, ನೇರ/ಪರೋಕ್ಷ ನಿರೂಪಣೆಯಾಗಿ ಪರಿವರ್ತನೆ, ವಾಕ್ಯದ ಭಾಗಗಳನ್ನು ಸರಿಪಡಿಸುವುದು, ಒಂದು ವಾಕ್ಯವೃಂದದಲ್ಲಿ ವಾಕ್ಯಗಳನ್ನು ಕಲೆಹಾಕುವುದು, ಮತ್ತಿತರ ಪ್ರಶ್ನೆಗಳು ಸೇರಿದಂತೆ 10ನೇ ತರಗತಿ/ ಪ್ರೌಢಶಾಲಾ ಮಟ್ಟದಲ್ಲಿ ಯಾವುದೇ ಇತರ ಇಂಗ್ಲಿಷ್ ಭಾಷೆಯ ಪ್ರಶ್ನೆಗಳು.

**4. ಸಾಮಾನ್ಯ ಜ್ಞಾನ**

ಈ ಘಟಕದಲ್ಲಿನ ಪ್ರಶ್ನೆಗಳು ಅಭ್ಯರ್ಥಿಯ ಸುತ್ತಲಿನ ಪರಿಸರದ ಸಾಮಾನ್ಯ ಜ್ಞಾನ ಮತ್ತು ಸಮಾಜಕ್ಕೆ ಅದರ ಅನ್ವಯವನ್ನು ಪರೀಕ್ಷಿಸುವ ಗುರಿಯನ್ನು ಹೊಂದಿವೆ. ಯಾವುದೇ ಸುಶಿಕ್ಷಿತ ವ್ಯಕ್ತಿಯಿಂದ ನಿರೀಕ್ಷಿಸಬಹುದಾದಂತೆ ಪ್ರಸ್ತುತ ಘಟನೆಯ ಜ್ಞಾನವನ್ನು ಮತ್ತು ಪ್ರತಿದಿನದ ವೀಕ್ಷಣೆಗಳು ಮತ್ತು ಅವರ ವೈಜ್ಞಾನಿಕ ಅಂಶದಲ್ಲಿನ ಅನುಭವವನ್ನು ಪರೀಕ್ಷಿಸಲು ಪ್ರಶ್ನೆಗಳನ್ನು ವಿನ್ಯಾಸಗೊಳಿಸಲಾಗಿದೆ. ಪರೀಕ್ಷೆಯು ಭಾರತ ಮತ್ತು ಅದರ

ನೆರೆಯ ದೇಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ, ವಿಶೇಷವಾಗಿ ಇತಿಹಾಸ, ಸಂಸ್ಕೃತಿ, ಭೌಗೋಳಿಕತೆ, ಆರ್ಥಿಕತೆ, ಸಾಮಾನ್ಯ ನೀತಿ, ಭಾರತೀಯ ಸಂವಿಧಾನ ಮತ್ತು ವೈಜ್ಞಾನಿಕ ಸಂಶೋಧನೆ ಮುಂತಾದ ವಿಷಯಗಳ ಬಗ್ಗೆ ಪ್ರಶ್ನೆಗಳು ಇರಲಿವೆ.

**5. ಸರ್ಕಾರಿ ನಿಯಮಗಳ ಕುರಿತ ಪ್ರಾವೀಣ್ಯತೆ ಪರೀಕ್ಷೆ**

ಈ ಘಟಕದಲ್ಲಿನ ಪ್ರಶ್ನೆಗಳು ಎಫ್ ಆರ್/ ಎಸ್ ಆರ್/ ಜಿಎಫ್ ಆರ್, ಪಿಂಚಣಿ ನಿಯಮಗಳು, ಸಂಗ್ರಹಣೆ/ ಉಗ್ರಾಣಗಳ ನಿರ್ವಹಣೆಗೆ ಸಂಬಂಧಿಸಿದ ಭಾರತ ಸರ್ಕಾರದ ನಿಯಮಗಳ ಕುರಿತ ಅಭ್ಯರ್ಥಿಯ ವಿವಿಧ ತಿಳುವಳಿಕೆಯನ್ನು ಪರೀಕ್ಷಿಸುವ ಗುರಿಯನ್ನು ಹೊಂದಿವೆ. ಆದಾಯ ತೆರಿಗೆ, ಜಿ ಎಸ್ ಟಿ, ಆರ್ ಟಿ ಐ, ಸಿಸಿಎಸ್, ಸಿಸಿಎ ನಿಯಮಗಳು, ಸಿಸಿಎಸ್ ನಡವಳಿಕೆ ನಿಯಮ ಇತ್ಯಾದಿ ವಿಷಯಗಳನ್ನು ಇವು ಹೊಂದಿವೆ.

**6. ಸ್ಯಾಪ್ ಪ್ರಾವೀಣ್ಯತೆ**

ಈ ಘಟಕದಲ್ಲಿ ವಿವಿಧ ಎಸ್‌ಎಪಿ (ಸ್ಯಾಪ್) ಅನ್ನು ನಿರ್ವಹಿಸುವ ಅಭ್ಯರ್ಥಿಯ ಸಾಮರ್ಥ್ಯವನ್ನು ಪರೀಕ್ಷಿಸಲಾಗುವುದು. ಮಾನವ ಸಂಪನ್ಮೂಲ, ಹಣಕಾಸು, ಖರೀದಿ ನಿಯಮಾವಳಿ ಇತ್ಯಾದಿ ಸೇರಿದಂತೆ ಸಾಫ್ಟ್‌ವೇರ್ ಸಂಬಂಧಿತ ಕಾರ್ಯಗಳ ಕುರಿತ ಪ್ರಶ್ನೆಗಳು ಇರಲಿವೆ.

//